'ಡೊನಾಲ್ಡ್!' ಆ ಧ್ವನಿ ಮತ್ತೆ ಹೇಳಿತು. ಈ ಸಲ ನೆನಪು ಮಾಡಿಕೊಳ್ಳಲು ಹೆಣಗಾಡುತ್ತಿರುವುದು ಹೊರತುಪಡಿಸಿ ಅದರಲ್ಲಿ ಏನೋ ಹೆಚ್ಚಿನದು ಕಂಡುಬಂದಿತು.

'ಈ ಊರಿಗೆ ನೀನು ಯಾವಾಗ ವಾಪಸು ಬಂದೆ?' ಮತ್ತೆ ಆತ್ಮೀಯತೆಯಿಂದ, 'ಎಲ್ಲಿದ್ದೀ ನೀನು?'

'ನಾನು ವಿಮಾನನಿಲ್ದಾಣದ ಹೊರಗೆ ಇದ್ದೇನೆ, ಕೆಲವೇ ಗಂಟೆಗಳಿಗೆ ಮಾತ್ರ.'

'ಒಳ್ಳೆಯದು, ಬಾ ನನ್ನನ್ನು ನೋಡುವಿಯಂತೆ.'

'ನೀನು ಮಲಗೋ ಸಮಯವೋ ಏನೋ?'

'ದೇವರೇ, ಇಲ್ಲ!' ಅವಳು ಉದ್ಗಾರ ಮಾಡಿದಳು. 'ನಾನಿಲ್ಲಿ ಕೂತಿದ್ದೇನೆ... ನಾನೊಬ್ಬಳೇ ಮದ್ಯಪಾನದಲ್ಲಿ ತೊಡಗಿದ್ದೇನೆ. ನಿನ್ನ ಟ್ಯಾಕ್ಸಿಯವನಿಗೆ ಹೇಳು.'

ದಾರಿಯಲ್ಲಿ ಬರುತ್ತಿರುವಾಗ ಡೊನಾಲ್ಡ್ ಅವಳೊಂದಿಗೆ ನಡೆದ ಸಂಭಾಷಣೆಯ ವಿಶ್ಲೇಷಣೆ ಮಾಡಿದನು. 'ವಿಮಾನ ನಿಲ್ದಾಣದಲ್ಲಿ' ಎಂಬ ಅವನ ಮಾತುಗಳು ಅವನು ಮೇಲ್‌ಮಧ್ಯಮವರ್ಗದಲ್ಲಿ ತನ್ನ ಅಂತಸ್ತನ್ನು ಉಳಿಸಿಕೊಂಡಿದ್ದಾನೆ ಎಂಬುದನ್ನು ತೋರಿಸುತ್ತಿತ್ತು. ನ್ಯಾನ್ಸಿಯೊಡನೆ ಮಾತಾಡಿದಾಗ ಅವಳು ಒಬ್ಬಂಟಿಯಾಗಿದ್ದಾಳೆ ಎಂಬುದನ್ನು ಅರ್ಥಮಾಡಿಕೊಂಡಿದ್ದ. ಹಾಗಾಗಿ ಅವಳು ಯಾವ ಸ್ನೇಹಿತರನ್ನೂ ಹೊಂದಿರದ ಆಕರ್ಷಣೆಯಿಲ್ಲದ ಪ್ರೌಢ ಹೆಂಗಸಾಗಿರಬಹುದು ಎಂದು ಅಂದುಕೊಂಡನು. ಅವಳ ಗಂಡ ಎಲ್ಲೋ ದೂರ ಹೋಗಿರಬಹುದು ಅಥವಾ ಮಲಗಿರಬಹುದು. ಮತ್ತು ಯಾಕೆಂದರೆ ಅವನ ಕನಸುಗಳಲ್ಲಿ ಅವಳು ಯಾವಾಗಲೂ ಹತ್ತು ವರ್ಷದವಳು ಆಗಿದ್ದಳು. ಅವಳು ಮದ್ಯಪಾನದಲ್ಲಿ ತೊಡಗಿರುವುದು ಅವನನ್ನು ದಂಗುಬಡಿಸಿತು. ಆದರೆ ಅವನು ಒಂದು ಮುಗುಳ್ನಗೆಯಿಂದ ಸುಧಾರಿಸಿಕೊಂಡನು; ಅವಳು ಮೂವತ್ತರ ಹತ್ತಿರ ಬಂದಿರುತ್ತಾಳೆ ಎಂದು ಅಂದುಕೊಂಡನು.

ಈ ಅಂಕುಡೊಂಕಾದ ರಸ್ತೆಯ ಪ್ರಯಾಣ ಕೊನೆಗೊಂಡಾಗ, ಅವನು ಕಪ್ಪುಕೂದಲ ಚಿಕ್ಕ ಚೆಲುವೆಯೊಬ್ಬಳು ದೀಪದಿಂದ ಬೆಳಗಿರುವ ಬಾಗಿಲಿನಲ್ಲಿ ಕೈಯ್ಯಲ್ಲಿ ಒಂದು ಗ್ಲಾಸು ಹಿಡಿದುಕೊಂಡು ನಿಂತಿರುವುದನ್ನು ನೋಡಿದನು. ಅಂತೂ ಕೊನೆಗೆ ಡೊನಾಲ್ಡ್ ಅವಳನ್ನು ಪ್ರತ್ಯಕ್ಷವಾಗಿ ನೋಡಿದಾಗ ಬೆರಗಾಗಿ, ಗಾಡಿಯಿಂದ ಇಳಿಯುತ್ತಾ ಹೇಳಿದನು:

'ಮಿಸೆಸ್ ಗಿಫರ್ಡ್?'

ಅವಳು ಅಂಗಳದ ಲೈಟನ್ನು ಹೊತ್ತಿಸುತ್ತಾ ಕಣ್ಣುಗಳನ್ನು ಅಗಲಿಸಿಕೊಂಡು ಅವನೆಡೆ ತುಸುಹೊತ್ತು ದಿಟ್ಟಿಸಿ ನೋಡಿದಳು; ಗೊಂದಲಗೊಂಡ ಭಾವದ ನಡುವೆಯೇ ಒಂದು ಮುಗುಳ್ನಗೆ ಹೊರಹೊಮ್ಮಿಸಿದಳು.

'ಡೊನಾಲ್ಡ್ ನೀನೇನಾ ನಾವೆಲ್ಲಾ ಹೀಗೆಯೇ ಬದಲಾವಣೆಯಾಗಿಬಿಡ್ತೇವೆ, ಓಹ್, ಬಹಳ ಬದಲಾಗಿಬಿಟ್ಟಿದ್ದೇವೆ!'

ಅವರು ಒಳಗೆ ಹೋಗುತ್ತಿದ್ದಂತೆ, ಅವರ ಧ್ವನಿಗಳು 'ಈ ಎಲ್ಲಾ ವರ್ಷಗಳು,' ಎಂಬ ಶಬ್ದಗಳನ್ನು ಉಲಿದವು ಮತ್ತು ಡೊನಾಲ್ಡ್‌ಗೆ ತಾನು ಹೊಟ್ಟೆಯೊಳಗೆಯೇ ಕುಸಿಯುತ್ತಿರುವಂತೆ ಅನಿಸಿತು. ಅವರ ಕೊನೆಯ ಭೇಟಿಯಲ್ಲಿ ಹೀಗೆಯೇ ಅನ್ನಿಸಿದ್ದು ಅವನಿಗೆ ನೆನಪಿಗೆ ಬಂತು – ಅವರಿಗೆ ಪರಸ್ಪರ ಹೇಳುವುದು ಇನ್ನೇನೂ ಉಳಿದಿಲ್ಲ – ಸ್ವಲ್ಪ ಭಾಗ ಹೆದರಿಕೆಯಿಂದಲೇ ಇರಬಹುದು ಎಂಬುದನ್ನು ಸೂಚಿಸಿ, ಮಧ್ಯದಲ್ಲಿಯೇ ಅವನನ್ನು ಸಾಯುವಂತೆ ಮಾಡಿ ಅವಳು